ಹೆಸರು ಮತ್ತು ಮೇಲ್ವಿಳಾಸ ಪೂರ್ತಿಯಾಗಿ ಕೆಳಗೆ ಸಮೂದಿಸಲ್ಪಡಬೇಕು.

ದರಖಾಸ್ತು ಮಾಡೋಣದ ತಾಕಿನ ವಿವರಣೆ.

ನಂಬರು.	ಹೆಸರು.	ವಿಸ್ತೀರ್ಣ.

ತಾರೀಖು—ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1510.—1878ನೇ ಇಸವಿ ಆಗಸ್ಟ್ 10ನೇ ಮತ್ತು ಂ 130ನೇ ನಂಬರ್‌ವುಳ್ಳ ಲೀಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಇದರಡಿ ನಮೂದ್ ಮಾಡಲ್ಪಟ್ಟ ಶಿವಮೊಗ್ಗಾ ಪಟ್ಟಣದ ಪರಿಷ್ಕರಿಸಲ್ಪಟ್ಟ ಚಕ್ಕುಬಂದಿಯು ದಿವಾಣರವರಿಂದ ಮಂಜೂರ್ಮಾಡಲ್ಪಟ್ಟು ಸರ್ಕಾರ ತಿಳುವಳಿಕೇ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಉತ್ತರಕ್ಕೆ.—ಶಿಂಗಪ್ಪನವರ ಬಂಗಲೇಯಿಂದ ಸದರೀ ಬಂಗಲೇ ದೇಖೀಲ್ ಮ್ಯುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೊರಟು ಮೆ॥ ಡರ್ಕರ್ ಮೆರ್ಕೆಂಜಿ ಬಂಗಲೆ ಮತ್ತು ಯಗ್ಜಿಕ್ಯೂಟಿವ್ ಇಂಜನಿಯರ್ ಆಫೀಸ್ ದೇಖೀಲ್ ಶಿವಮೊಗ್ಗೆಯ 30ನೇ ಸರ್ವೇನಂಬರ್ ಬಳಿ ಹೊನ್ನಾಳಿ ರಸ್ತೆಯ ವರಿಗೂ ವಿಸ್ತರಿಸಿ ಅದೇರಸ್ತೆ ಮಾರ್ಗವಾಗಿ ಹೊರಟು, ಶಿವಮೊಗ್ಗಾ—ಹೊನ್ನಾಳಿ (ಹರಿಹರ) ರಸ್ತೆಗಳು ಅಂದರೆ (ವಂ ಮು.ಯಗ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನ ಮುಂಭಾಗದಿಂದಲೂ ಮತ್ತೊಂದು ಸೋಮಯ್ಯನವರ ಕೆರೆ ಯೇರಿ ಯಿಂದಲೂ ಆರಂಭಿಸುವ) ಸಂಧಿಸುವ ಮುಳಕೆರೆಯ 60ನೇ ಸರ್ವೇ ನಂಬರ್ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರೆಗೂ ವಿಸ್ತರಿಸುತ್ತದೆ.

ದಕ್ಷಿಣಕ್ಕೆ.—ಪೊಲೀಸ್ ಠಾಣೇ ದೇಖೀಲ್ ಅದರ ಬಳಿಯಣ ಆಗುಂಬಿ ರಸ್ತೆಯಿಂದ ತುಂಗಾ ನದಿವರಿಗೂ ಅಂದರೆ ತುಂಗಾ ನದಿ ಕೇತುವೆ ದಕ್ಷಿಣ ದಿಕ್ಕಿನ ಕೊನೆ ವರಿಗೂ ವಿಸ್ತರಿಸುತ್ತದೆ.

ಪೂರ್ವಕ್ಕೆ.—ಸದರೀ ತುಂಗಾನದಿ ಕೇತುವೆಯ ದಕ್ಷಿಣ ದಿಕ್ಕಿನ ಕೊನೇಯಿಂದ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೇ ಯೇರಿ ದಾಟಿ ಶಿವಮೊಗ್ಗಾ ಹೊನ್ನಾಳಿ ರಸ್ತೆಗಳು (ಎಂದನೇ ಕಲಂನಲ್ಲಿ ಪ್ಯಾರ್ಟಿಥಿ ಸೆನ್‌ನಲ್ಲಿ ತೋರಿಸಲ್ಪಟ್ಟಂತೆ) ಸಂಧಿಸುವ ಮುಳ ಕೆರಿಯ 60ನೇ ಸರ್ವೇ ನಂಬರ್ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರಿಗೂ ವಿಸ್ತರಿಸುತ್ತದೆ.

ಪಶ್ಚಿಮಕ್ಕೆ.—ಹೋದಿಗೆರೆ ಮುರಿಗೇಂದ್ರಪ್ಪನ ಬಂಗಲೇಯಿಂದ ಸದರೀ ಬಂಗಲೆ ದೇಖೀಲ್ ಸಾಗರದ (ಹೊನ್ನಾನಾರ) ದೊಡ್ಡರಸ್ತೆ ಮಾರ್ಗವಾಗಿ ದಕ್ಷಿಣಕ್ಕಾಗಿ ಶೀದಾರ್ ತಬೇಲಿ ಮತ್ತು ಲೈಸ್‌ಯೂನೆ ಮನೆಗಳು ದೇಖೀಲ್ 113 ಮತ್ತು 114ನೇ ಸರ್ವೇನಂಬರುಗಳು ಸಹಿತವಾಗಿ ಆಗುಂಬೀ ರಸ್ತೆಯಲ್ಲಿ ತುಂಗಾ ನದೀವರಿಗೂ ವಿಸ್ತರಿಸುತ್ತದೆ.

ತಾರೀಖು 2ನೇ ನವೆಂಬರ್ 1887.

ನಂ. 140.—ಖಜಾನಾ ಬಕ್ಷಿ ಮೆ॥ ಎ. ವೀರಾಸಾಮಿ ಮೊದಲಿಯಾರ್‌ಗೆ ಮಾಹೇ ಗುಜಷ್ತಾ 22ನೇ ಮತ್ತು ಂ 1551ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಐದು ದಿವಸಗಳ ಪ್ರಿವಿಲೀಜ್ ರಜಾವು, ಅವರಿಂದ ಉಪಯೋಗಿಸಲ್ಪಡದ ಕಾರಣ ಯಿದರದೆಕೇಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 4ನೇ ನವೆಂಬರ್ 1887.

ನಂ. 141.—ಮಾಹೇ ಗುಜಷ್ತಾ 7ನೇ ಮತ್ತು ಂ 1430ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಮೆ॥ ವಿ. ಪಿ. ಮಾಧವರಾಯರಿಗೆ ಕೊಡಲ್ಪಟ್ಟ ಎಂದು ತಿಂಗಳ ಪ್ರಿವಿಲೀಜ್ ರಜಾದಿಂದ ಅವರು ವಾಪಸ್ ಬಂದು ಸದರೀ ಮಾಹೆ 30ನೇ ಮತ್ತು ಂ ಪೂರ್ವಾನ್ವದಲ್ಲಿ ಮೆ॥ ಬಿ. ತಿರುಮಲಾಚಾರಿಯವರಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಚಾರ್ಜನ್ನು ಪುನಹ ವಹಿಸಿರುತ್ತಾರಾಗಿ ಉಳಿದ ರಜಾ ಇದರದೆಕೇಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 24ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1580.—ಶ್ರೀಮರ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ. ಇದರಡೀಕಂಡ ಜಮ್ಮಿ ತಾಕುಗಳು, ಮೈಸೂರು ದೇಶದಲ್ಲಿ ಕೆಲವು ಜಮ್ಮಿ ತಾಕುಗಳೊಳಗೆ ಗನೀ ಕೆಲಸನಡಿಸುವ ಬಗ್ಗೆ ಲೈಸೆನ್ಸಿಗೋಸ್ಕರ ದರಖಾಸ್ತುಗಳನ್ನ ಅಪೇಕ್ಷಿಸುವಂಥಾ 1887ನೇ ಇಸವಿ ಸೆಪ್ಟಂಬರ್ 12ನೇ ಮುಕ್ತುಂ 113ನೇ ನಂಬರ್ ಇಸ್ತಿಹಾರ್‌ನಾಮೆಯ A ಗುರ್ತಿನ ಅರ್ಜಿಡಿಕ್ಲೆಗೆ ಸೇರಿಸಲ್ಪಡತಕ್ಕದ್ದು:—

ಪ್ರತಿತಾಕು ನಂಬರು.	ಪ್ರತಿ ತಾಕು ಆಕ್ರಮಿಸಿರುವ ತಾಲ್ಲೂಕು ನಂಬರು.	ಪ್ರತಿ ತಾಕು ಇರತಕ್ಕ ಪ್ರದೇಶ.			ಪ್ರತಿ ತಾಕು ಯಾವ ಯಾ ತ್ರಿಕೋನಮಿತಿಯ ಸ್ಟೇಷನ್ ನಂಬರ್	ಪ್ರತಿ ತಾಕು ಯಾವ ಯಾ ಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತೆಂಬುವದು.		ಹಿಂದಿನ ಕಡೇ ಮೇಸ್ತಕಿನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮ್ಮಿಪೈಕಿ ಇದುವರಿಗೆ ಅನ್ಯಥಾ ವಿಲ್ಲಾಮ್ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	ಪ್ರತಿ ತಾಕು ಯಾವ ಯಾ ದಿಕ್ಕಿಗೆ ಹಿಂದಿನ ಸರ್ವೆಯ ಸ್ಟೇಷನ್ನಿಗೆ ಸಂಬಂಧಪಟ್ಟಿರುವದು ಮತ್ತು ಅದರ ದೂರ (ಮೈಲಿಗಳಲ್ಲಿ)
		ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮಗಳು.		ದಕ್ಷಿಣೋತ್ತರ ವೃತ್ತಗಳು.	ಯಾಮ್ಯೋತ್ತರ ರೇಖೆ.		
15		ಹಾಸನ	ಚನ್ನರಾಯಪಟ್ಟಣ	1 ಮೂಲಕಟ್ಟೆ ಹಳ್ಳಿ 2 ಮಾದಾಪುರ 3 ರಾಜಾಪುರ	55	12°—56′ ಮತ್ತು 12°—57′ರ ಮಧ್ಯೆ	76°—33′ ಮತ್ತು 76°—35′ರ ಮಧ್ಯೆ		½ ಚದರಮೈಲಿ ಅಂದರೆ, ಪೂರ್ವ ಪಶ್ಚಿಮ ವಂದು ಮೈಲಿ ಉತ್ತರ ದಕ್ಷಿಣ ½ಮೈಲಿ
16		ಸ್ಯೊಸೂರು	ಶ್ರೀರಂಗಪಟ್ಟಣ	1 ಹುವ್ವಿನಕೆರೆ 2 ವಡಯಂಡ ಹಳ್ಳಿ 3 ಗೊಬ್ಬಗಾಲ 4 ಕಾಳೇನಹಳ್ಳಿ 5 ಪೆರಮಾಂಡ ಹಳ್ಳಿ	57	12°—25′ ಮತ್ತು 12°—27′ರ ಮಧ್ಯೆ	76°—50′ ಮತ್ತು 76°—51′ರ ಮಧ್ಯೆ		½ ಚದರ ಮೈಲಿ

ತಾರೀಖು 23ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1587.—ಷಿಕಾರಿಪುರ ವ ಸೊರಬ ತಾಲ್ಲೂಕಿನ ಇದರಡೀಕಂಡ ಮೊಗಣೀಗಳು ಫಾರೆಸ್ಟು ಕೆಲಸಗಳಿಗೋಸ್ಕರ ಮಲ್‌ನಾಡಿಯಿದಾಗಿ ಆಚರಿಸಲ್ಪಡತಕ್ಕದ್ದು:—

ಷಿಕಾರಿಪುರ ತಾಲ್ಲೂಕು	..	ಹಳಂದೂರು ಮೊಗಣಿ ಬಾರೂರು ,,
ಸೊರಬ ತಾಲ್ಲೂಕು	..	ಸೊರಬ ,, ಕ್ಯಾಸನೂರು ,, ಚಂದ್ರಗುತ್ತಿ ,, ಚಿಟ್ಟೂರು ,, ಶಿಗ್ಗಾ ,, ಹೆಬ್ಬಿ ,,

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟರಿ.